8. ತೋಟಗಾರಿಕೆ ಇಲಾಖೆವತಿಯಿಂದ ವನವಹೋತ್ಸವ, ವೃಕ್ಷ ಸಂವರ್ದನೆ, ಒಣಭೂಮಿ ಅಭಿವೃದ್ಧಿ ಇತ್ಯಾದಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಾಗುತ್ತಿದೆ.

ಇ) ಮಂಗಳೂರು ಕದ್ರಿ ಉದ್ಯಾನವನವನ್ನು ಅಭಿವೃದ್ಧಿಗೊಳಿಸಲು ಚೈನ್‌ಲಿಂಕ್ ಬೇಲಿ ನಿರ್ಮಿಸಲಾಗಿದೆ. ಅಲಂಕಾರಿಕ ಗಿಡಗಳನ್ನು ಹಬ್ಬಿಸಲು ಕಮಾನು ನಿರ್ಮಾಣಮಾಡಲಾಗಿದೆ. ಪಾಟಿಂಗ್ ಶೆಡ್ ನಿರ್ಮಾಣ ಮಾಡಲಾಗಿದೆ. ಶೆಬ್ಬರಿ ಮತ್ತು ಹೊಸ ಅಲಂಕಾರಿಕ ಗಿಡಗಳ ನಾಟಿ ಮಾಡಲಾಗಿದೆ.

ಅಲ್ಲದೆ ಇನ್ನೊಂದು ಕಮಾನು ನಿರ್ಮಾಣ ಮಧ್ಯಭಾಗದ ವೃತ್ತದ ಹೊರಭಾಗದ ರಸ್ತೆಯ ಎರಡು ಬದಿಗೆ ಕೆಂಪು ಕಲ್ಲಿನಿಂದ ಕಟ್ಟುವುದು, ರಸ್ತೆ ಮಧ್ಯಭಾಗಕ್ಕೆ ಮಣ್ಣು ತುಂಬಿ ಎತ್ತರವಾಗಿಸುವುದು ಮತ್ತು ಕದ್ರಿ ಉದ್ಯಾನವನದಲ್ಲಿ ಹುಲ್ಲು ಕತ್ತರಿಸಲು ಲಾನ್ ಮೂವರ್ ಖರೀದಿಸಲು ಕ್ರಮ ಕೈಗೊಳ್ಳಲಾಗಿದೆ.

ವಿಧಾನ ಸೌಧದಲ್ಲಿರುವ ಕರ್ನಾಟಕ ರಾಜ್ಯ ಕೋ–ಆಪರೇಟಿವ್ ಅಪೆಕ್ಸ್ ಬ್ಯಾಂಕನಲ್ಲಿ ಎ.ಟಿ.ಎಂ. ತೆರೆಯುವುದು

635(5207) : ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಕರ್ನಾಟಕ ರಾಜ್ಯ ಕೋ–ಆಪರೇಟಿವ್ ಅಪೆಕ್ಸ್ ಬ್ಯಾಂಕ್ ಶಾಖೆಗಳ ಸಂಖ್ಯೆ ಎಷ್ಟು;

ಆ) ಇವುಗಳ ಪೈಕಿ ಎಲ್ಲೆಲ್ಲಿ ಎ.ಟಿ.ಎಂ. ಸೌಲಭ್ಯ ಕಲ್ಪಿಸಲಾಗಿದೆ.

ಇ) ಬೆಂಗಳೂರು ವಿಧಾನಸೌಧದ ಶಾಖೆಯಲ್ಲಿರುವ ಒಟ್ಟು ಎಲ್ಲಾ ವಿಧದ ಖಾತೆಗಳ ಸಂಖ್ಯೆ ಎಷ್ಟು;

ಈ) ವಿಧಾನ ಸೌಧದಲ್ಲಿ ಖಾತೆ ಹೊಂದಿರುವವರಿಗೆ ಅನುಕೂಲವಾಗಲು ಎ.ಟಿ.ಎಂ.ಸೌಲಭ್ಯ ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು):

ಅ) ಬೆಂಗಳೂರು ನಗರದಲ್ಲಿ ಒಟ್ಟು 30 ಶಾಖೆಗಳಿರುತ್ತವೆ.

ಆ) ಯಾವ ಶಾಖೆಯಲ್ಲೂ ಎ.ಟಿ.ಎಂ.ಸೌಲಭ್ಯ ಕಲ್ಪಿಸಿರುವುದಿಲ್ಲ.

ಇ) ಒಟ್ಟು ಖಾತೆಗಳ ಸಂಖ್ಯೆ 10775.

ಈ) ವಿಧಾನ ಸೌಧದಲ್ಲಿ ವಿಸ್ತಾರವಾದ ಸ್ಥಳಾವಕಾಶವನ್ನು ಒದಗಿಸಿದಲ್ಲಿ ಗ್ರಾಹಕರಿಗೆ ಎ.ಟಿ.ಎಂ. ಸೌಲಭ್ಯ ಒದಗಿಸಲು ಅಪೆಕ್ಸ್ ಬ್ಯಾಂಕ್ ಸಿದ್ಧವಿದೆ.

ಭದ್ರಾ ಸಹಕಾರ ಸಕ್ಕರೆ ಕಾರ್ಖಾನೆಯ ದುರಾಡಳಿತದ ಬಗ್ಗೆ ತನಿಖೆ

636 (5426) : ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡಬಾತಿ ಇದರ ದುರಾಡಳಿತದ ಬಗ್ಗೆ ತನಿಖೆಗಾಗಿ ಸೂಕ್ತ ಅಧಿಕಾರಿಯನ್ನು ನೇಮಿಸಿ ತನಿಖೆ ಕಾರ್ಯ ಕೈಗೊಂಡು ಒಂದು ಪ್ರಸ್ತುವವನ್ನು ಸಲ್ಲಿಸುವಂತೆ ಸಹಕಾರ ನಿಬಂಧಕರಿಗೆ 23.09.02ರಲ್ಲಿ ನಿರ್ದೇಶಿಸಿರುವುದು ನಿಜವೆ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸದರಿ ಅಧಿಕಾರಿಯವರು ತೆಗೆದುಕೊಂಡಿರುವ ಕ್ರಮಗಳೇನು;

ಇ) ತನಿಖೆ ಆಗಿದ್ದಲ್ಲಿ ಪ್ರಸ್ತಾವದ ವಿವರಗಳೇನು;

ಈ) ಆಗಿರದೇ ಇದಲ್ಲಿ ಕಾರಣಗಳೇನು ಮತ್ತೆ ಯಾವಾಗ ಮಾಡಲಾಗುವುದು?

ಶ್ರೀ ಎಚ್.ವಿಶ್ವನಾಥ್ (ಸಹಕಾರ ಸಚಿವರು):

ಅ) ಹೌದು

ಆ) ತನಿಖೆಗಾಗಿ ಬಂದಿರುವ ಅರ್ಜಿಯಲ್ಲಿನ ಅಂಶಗಳ ಬಗ್ಗೆ ಈಗಾಗಲೇ ಕ್ರಮವಹಿಸಿದ್ದರಿಂದ ಆ ಬಗ್ಗೆ ಮತ್ತೆ ವಿಚಾರಣೆಗೆ ಒಳಪಡಿಸುವ ಅವಶ್ಯಕತೆ ಕಂಡುಬರುವುದಿಲ್ಲ.

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ

ರಾಜ್ಯದಲ್ಲಿ ಬೃಹತ್ ನೀರಾವರಿ ಯೋಜನೆಗಳು

637 (5423) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬೃಹತ್ ನೀರಾವರಿ ಯೋಜನೆಗಳು ಹಾಗೂ ಅವುಗಳ ನೀರಾವರಿ ಸಾಮರ್ಥ್ಯ ಎಷ್ಟು (ಯೋಜನೆಗಳಿಗೆ ಅನುಗುಣವಾಗಿ ತಿಳಿಸುವುದು)

ಆ) ಎಷ್ಟು ಬೃಹತ್ ಯೋಜನೆಗಳು ಸಂಪೂರ್ಣಗೊಂಡಿವೆ; ಹಾಗೂ ಬಾಕಿ ಎಷ್ಟು ಉಳಿದಿರುವುವು (ಸ–ಕಾರಣಗಳೊಂದಿಗೆ ತಿಳಿಸುವುದು);

ಇ) ಸದರಿ ಯೋಜನೆಗಳಿಗೆ ಹಾಕಿಕೊಂಡಿರುವ ಕಾಲಮಿತಿ ತಿಳಿಸುವುದು;

ಈ) ಹಾಕಿಕೊಂಡ ಕಾಲಮಿತಿಯೊಳಗೆ ಮುಗಿಯದೇ ಇರುವ ಯೋಜನೆಗಳು ಎಷ್ಟು; (ವಿವರವಾಗಿ ತಿಳಿಸುವುದು):

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ರಾಜ್ಯ ಜಲ ಸಂಪನ್ಮೂಲ ಇಲಾಖೆಯಲ್ಲಿ ಒಟ್ಟು 22 ಬೃಹತ್ ನೀರಾವರಿ ಯೋಜನೆಗಳಿವೆ.

1. ಪೂರ್ಣಗೊಂಡಿರುವ ಯೋಜನೆಗಳು 7
2. ಪ್ರಗತಿಯಲ್ಲಿರುವ ಯೋಜನೆಗಳು 15

ಅ) ರಾಜ್ಯದಲ್ಲಿ ಈವರೆಗೆ ಒಟ್ಟು 7 ಬೃಹತ್ ನೀರಾವರಿ ಯೋಜನೆಗಳು ಪೂರ್ಣಗೊಂಡಿದ್ದು, ಇನ್ನೂ 15 ಯೋಜನೆಗಳು ಪ್ರಗತಿಯಲ್ಲಿವೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಯೋಜನೆಗಳ ಅನುಷ್ಠಾನಕ್ಕಾಗಿ ನಿಗದಿಗೊಳಿಸಲಾದ ಕಾಲಮಿತಿಯ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಭಾರಿ ನೀರಾವರಿ ಯೋಜನೆಗಳು ಭಾರಿ ಬಂಡವಾಳ ಹೂಡಿಕೆಯ ಮೇಲೆ ಅವಲಂಬಿತವಾಗಿರುವುದರಿಂದ ಮತ್ತು ಅಪಾರ ಭೂಸ್ವಾಧೀನ, ಪುನರ್‌ವಸತಿ, ಕೇಂದ್ರ ಜಲ ಆಯೋಗದ ವಿವಿಧ ನಿರ್ದೇಶನಾಲಯಗಳಿಂದ ಅನುಮೋದನೆ ಅವಶ್ಯವಿರುವ ಕಾರಣ ಹಾಗೂ ಯೋಜನೆಗಳ ವಿನ್ಯಾಸದಲ್ಲಿ ಬದಲಾವಣೆ ಮಾಡಿರುವ ಕಾರಣಗಳಿಂದ ಯೋಜನೆಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.